ಪ್ರಯತ್ನಿಸಿದ. ಗಾಂಧೀಜಿ ಜೀವನಾದರ್ಶಗಳನ್ನು ತಾನು ಪಾಲಿಸುತ್ತಲೇ ಜನರಲ್ಲಿ ಬಿತ್ತಲು ನೋಡಿದ. ಬೆರಳೆಣಿಕೆಯಷ್ಟು ಜನ ಇವನ ಹಿಂಬಾಲಕರಾದರು. ಉಳಿದವರೆಲ್ಲ ಟೀಕಿಸಿ ನಕ್ಕರು. ಅವರೆಲ್ಲರ ನಂಬಿಕೆಯ ಬುಡವನ್ನೇ ಅಲುಗಾಡಿಸುವಂಥ ಘಟನೆಯೊಂದು ಜರುಗಿತ್ತು. ತಿಪಟೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ಒಮ್ಮೆ ಹದಿನೈದು ಲಕ್ಷದ ಹೇರಾಫೇರಿ ನಡೆದಿತ್ತು. ಅದರಲ್ಲಿ ಸತ್ಯ ಹಾಗೂ ಅಕೌಂಟೆಂಟ ರಾಜಾರಾವ್‌ನ ಹೆಸರು ಕೇಳಿ ಬಂದಿತ್ತು. ಇಬ್ಬರೂ ಪ್ರಾಮಾಣಿಕರೇ. ಕೆಲವರು ಉದ್ದೇಶಪೂರ್ವಕವಾಗಿಯೇ ಮಾಡಿಸಿದಂತಿತ್ತು. ಬ್ಯಾಂಕಿನ ಮುಖ್ಯಸ್ಥರು ದಂಡ ಹಾಕಿ ಒಳಗೊಳಗೇ ಪ್ರಕರಣವನ್ನು ಮುಚ್ಚಿಹಾಕಲು ನೋಡಿದರು. ಸತ್ಯ ಬಿಡಲಿಲ್ಲ. ನ್ಯಾಯಕ್ಕಾಗಿ ಪಟ್ಟು ಹಿಡಿದ. ಗಾಂಧೀಜಿಯ ಪಟ ಇಟ್ಟುಕೊಂಡು



ಸತ್ಯಾಗ್ರಹಕ್ಕೆ ಮುಂದಾದ. ರಾಜಾರಾವ್ ಕೂಡ ಸೇರಿಕೊಂಡ. ಯಾರೇ ಬುದ್ಧಿ ಹೇಳಿದರೂ ಬಗ್ಗಲಿಲ್ಲ. ಆಗೊಮ್ಮೆ ಅವನ ಮೇಲೆ ಹಲ್ಲೆಯೂ ನಡೆಯಿತು. ರಾಜರಾವ್ ಹೆದರಿ ತೆಪ್ಪಗಾದ. ಸಣಕಲಸಿಂಗ್ ಸತ್ಯ ಹೆದರಲಿಲ್ಲ. ಗಾಯಗೊಂಡರೂ ಅಳುಕದೇ ಪೊಲೀಸರಿಗೆ ಕಂಪ್ಲೇಂಟ್ ಕೊಡಲು ತೀರ್ಮಾನಿಸಿದ. ಉಚ್ಛ ಅಧಿಕಾರಿಗಳಿಗೆ ಸುದ್ದಿ ಮುಟ್ಟಿದಾಗ ವಿಚಾರಣೆ ನಡೆದಿತ್ತು. ಸತ್ಯ ಮತ್ತು ರಾಜಾರಾವ್‌ನ ಪ್ರಾಮಾಣಿಕತೆ ಸಾಬೀತಾಯಿತು. ತಪ್ಪಿತಸ್ಥರಿಗೆ ಶಿಕ್ಷೆಯಾಗಿ ಸತ್ಯನಿಗೆ ಬಡ್ತಿ ದೊರೆತು ಮ್ಯಾನೇಜರ್ ಆಗಿದ್ದ.

ಮನೆಯಲ್ಲೂ ಸ್ಥಿತ್ಯಂತರಗಳು ನಡೆದಿದ್ದವು. ತಾತನ ಸಹಾಯದಿಂದ ಎಂಜಿನಿಯರಿಂಗ್ ಮುಗಿಸಿದ ವಸಂತನಿಗೆ ಕೆಲಸ ದೊರೆತಿತ್ತು. ತಾತನಿಂದ ಹೊಸ ಕಾರು ಬಳುವಳಿಯಾಗಿ ದೊರೆತಿತ್ತು. ಶಿರೀಷಾಳ ಪದವಿ ಮುಗಿಯುತ್ತಿದ್ದಂತೆ ಕೇಶವರೆಡ್ಡಿ ಗಂಡು ನೋಡಿದ್ದರು. ಹುಬ್ಬಳ್ಳಿಯಲ್ಲಿ ಕೆಲಸ ಮಾಡುತ್ತಿದ್ದ ಸತ್ಯ ಬಂದು ಸರಳ ವಿವಾಹದ ಪ್ರಾಮುಖ್ಯತೆಯನ್ನು ಮಕ್ಕಳಿಗೆ ಮನಗಾಣಿಸಲೆತ್ನಿಸಿದ. ಇಬ್ಬರೂ ಸರ್ರನೆ ತಿರುಗಿಬಿದ್ದು, “ನಿಮ್ಮ ಆದರ್ಶಗಳು ನಿಮಗೇ ಇರಲಿ. ನಾವು ಬದುಕನ್ನು ವೈಭವದಿಂದ ಅನುಭವಿಸಬೇಕು” ಎಂದಿದ್ದರು. ತಾತ ಪೋಷಿಸಿದ ಮರದ ಫಲಗಳಲ್ಲವೇ? ಮರುಮಾತನಾಡದೇ ಹೆಂಡತಿಯ ಕೈಯಲ್ಲಿ ಮಕ್ಕಳ ಹೆಸರಲ್ಲಿ ತಾನು ಕೂಡಿಟ್ಟ ತನ್ನ ಕೈಯಿಂದಾದಷ್ಟು ದುಡ್ಡನ್ನಿಟ್ಟವ ಮತ್ತೆ ನೇರವಾಗಿ ಮದುವೆಗೇ ಬಂದಿದ್ದ. ಇಂದ್ರನ ಒಡ್ಡೋಲಗದಂತೆ ಹೊಳೆಯುವ ಮಂಟಪ, ಭರ್ಜರಿ ಮದುವೆ. ಎಲ್ಲಾ ಮಾವನ ಕೃಪೆಯೆಂದು ತಿಳಿದವ ತನ್ನ ತತ್ವಗಳನ್ನು ನೆನೆದು ಮೂಕನಾದ. ವಸಂತನ ಮದುವೆಯೂ ಅಷ್ಟೇ ವೈಭವದಿಂದ ಜರುಗಿತ್ತು. ಎಲ್ಲರಿಗೂ ಗಾಂಧೀಜಿಯ ಆದರ್ಶಗಳನ್ನು ಬೋಧಿಸುವವನ ಮನೆಯಲ್ಲಿ ಅವಕ್ಕೆ ತಾವಿರಲಿಲ್ಲ.

ಕಾಲರಾಯ ಮುಂದೆ ಸಾಗುತ್ತಿದ್ದಂತೆ ಸತ್ಯಪ್ಪನಿಗೆ ನಿವೃತ್ತಿಯಾಗಿತ್ತು. ಕತ್ತಿಗೆ ಹಾರ ಹಾಕಿ, ಕೈಯಲ್ಲಿ ಹಣ್ಣಿನ ತಟ್ಟೆಯನ್ನಿಟ್ಟು ಕಳುಹಿಸಿದಾಗ ಬ್ಯಾಂಕಿನ ಎಷ್ಟೋ ಜೀವಗಳು ನಿಟ್ಟುಸಿರು ಬಿಟ್ಟಿದ್ದವು. ಮನೆಗೆ ಬಂದವನಿಗೆ ಇರಿಸು ಮುರಿಸಾದದ್ದು ನಿಜ. ಇಷ್ಟು ದಿನಗಳವರೆಗೆ